ಪ್ರಬಂಧ

# ಹೀಗೊಂದು ದಂತಕತೆ!



**ಈರಪ್ಪ ಎಂ. ಕಂಬಳಿ**

ಕಲೆ: ಸಂತೋಷ್ ಸಸಿಹಿತ್ಲು

'ಪ್ರಥಮ ಚುಂಬನಂ ದಂತ ಭಗ್ನಂ' – ಇದು ಅನನುಭವಿಗಳನ್ನು ಕುರಿತು ಉಗ್ಗಡಿಸುವ ಹಳೆಯ ಗಾದೆ. ಅದರ ಜಿಜ್ಞಾಸೆಗೆ ಇಲ್ಲಿ ತೊಡಗಲಾರೆ. ದಂತ ಅಂದಾಕ್ಷಣ ಹೊರಚಾಚಿದ ಆನೆಯ ಕೋರೆಹಲ್ಲುಗಳು ಕಣ್ಣಮುಂದೆ ಬರುತ್ತವೆ ಅಲ್ಲವೇ. ಭಾರತೀಯ ಪುರಾಣ ಕಲ್ಪನೆಯಂತೆ ಶಿವನ ಕುಮಾರರಲ್ಲಿ ಒಬ್ಬನಾದ ಗಣಪತಿ ದೇವರ ಒಂದು ಹಲ್ಲು ಮುರಿದಿದೆ. ಆದ್ದರಿಂದಲೇ 'ವಕ್ರದಂತ' ಎಂಬ ಹೆಸರು ಬಂದಿದೆ.

ಹೈಸ್ಕೂಲು ಓದುವಾಗ ನಮ್ಮ ಮಾಸ್ತರರೊಬ್ಬರಿದ್ದರು. ಮಾತಿಗೆ ಮೊದಲು 'ಹಲ್ಲುದುರುಸ್ತೀನಿ' ಎಂದು ಹೇಳುತ್ತಿದ್ದರೇ ಹೊರತು ಮೂರು ವರ್ಷಗಳಲ್ಲಿ ನಮ್ಮ ಯಾರೊಬ್ಬರ ಹಲ್ಲೂ ಉದುರಲಿಲ್ಲ. ಅದೇ ನಮ್ಮ ಓಣಿಯ ಹಿರಿಯಕ್ಕನ ಬಾಯಿಯೊಳಗಿನ ಮುಂದಿನ ಮೂರು ಹಲ್ಲೂ ಉದುರಿದ್ದವು, ಅದೂ ಮೂವತ್ತಕ್ಕೆ ಮೊದಲೇ. ಅದರ ಗುಟ್ಟೇನೆಂದು ಪುಸಲಾಯಿಸಿ ಕೇಳಿದರೂ ಬೊಚ್ಚು ಬಾಯಲ್ಲಿ ಪುಸ್ಸೆಂದು ನಗುತ್ತಿದ್ದಳೇ ವಿನಾ ಗುಟ್ಟು ಬಿಟ್ಟುಕೊಡುತ್ತಿರಲಿಲ್ಲ. ಮನೆಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೇಳಿದಾಗ ಅದಕ್ಕೆ ಆಕೆಯ ಗಂಡನೇ ಕಾರಣ ಎಂದು ಗೊತ್ತಾಯಿತು. ಜಟಾಪಟಿ ನಡೆದಾಗಲೆಲ್ಲ 'ಹೆಂಗಸಿನ ಮೇಲೆ ಕೈ ಮಾಡುವವ ನೀನೊಬ್ಬ ಗಂಡಸಾ?' ಎಂದು ಈಕೆ ಕೆಣಕಿದಾಗಲೆಲ್ಲ, ಆತ ತನ್ನ ಪೌರುಷವನ್ನು ಮೆರೆಯಲು ಸೀದಾ ಬಚ್ಚಲ ಮನೆಯ ಕಟ್ಟೆಯ ಮೇಲಿರುತ್ತಿದ್ದ ದುಂಡಗಿನ ಹಿತ್ತಾಳೆ ತಂಬಿಗೆಯೊಳಗೆ ಕೈ ತೂರಿಸಿ, ಮುಷ್ಠಿಯುದ್ಧಕ್ಕೆ ಇಳಿಯುತ್ತಿದ್ದನಂತೆ. ಪರಿಣಾಮವಾಗಿ ಮುಂದಿನ ಹಲ್ಲುಗಳು ಉದುರಿದ್ದವೆಂದು ಆಕೆಯ ತಮ್ಮನೇ ಹೇಳುತ್ತಿದ್ದ. ಗಟ್ಟಿಗೆ ಹಚ್ಚಿ, ಘಟವಾಣಿಯಾದ ಆಕೆಯನ್ನು ಕೇಳಿದಾಗ, ಹೌದೆನ್ನುವಂತೆ ಬೊಚ್ಚು ಬಾಯಲ್ಲಿ ನಗುತ್ತಾಳೆ. 'ಗಂಡ–ಹೆಂಡಿರೆಂದರೆ ಜಗಳಾಡದೆ ಇರಲಾಗುತ್ತದೆಯೇ. ಗಪ್‌ಚಿಪ್ ಆಗಿ ಇರುವುದೆಂದರೆ ಅದೆಂಥಾ ಸಂಸಾರ, ಬುರ್ನಾಸು' ಎನ್ನುವಂತೆ!

ಸಾಮಾನ್ಯವಾಗಿ ಎಲ್ಲ ಮಕ್ಕಳಿಗೂ ದಿನಕ್ಕೆರಡು ಬಾರಿ ಹಲ್ಲುಜ್ಜಿ ಬಾಯಿ ತೊಳೆಯಬೇಕೆಂದು ದಂತವೈದ್ಯರು ಹೇಳುತ್ತಾರೆ. ಅದನ್ನು ಕಿವಿಗೆ ಹಾಕಿಕೊಂಡು ನಿತ್ಯ ಜಾರಿಗೆ ತಂದವರು ತೀರಾ ವಿರಳ. ಹಲ್ಲುನೋವು ಬಂದಾಗಲೇ ಹಲ್ಲಿನ ಡಾಕ್ಟರು ನೆನಪಾಗುವುದು. ಬೆಳಗಾಗೆದ್ದು ಬಾಯಿ ತೊಳೆಯಬೇಕೆಂದು ನನ್ನ ಗಂಡಜ್ಜಿ ನಮಗೆ ಹೇಳುತ್ತಿತ್ತು. 'ರಾತ್ರಿ ಮಲಗಿದಾಗ ನಿಮ್ಮ ಬಾಯಿ ಕಕ್ಕಾ ತಿನ್ನಲು ಹೋಗಿರುತ್ತದೆ. ಅದಕ್ಕೇ ಎದ್ದಕೂಡಲೇ ಚೆನ್ನಾಗಿ ಬಾಯಿ ತೊಳೆದುಕೊಳ್ಳಬೇಕು' ಎಂದು ತಾಕೀತು ಮಾಡುತ್ತಿತ್ತು, ನಾವು ಮಕ್ಕಳು